**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ</u>**
<u>ಸಿಸಿ ಸಂ. 249/2019 P.W.-1</u>

ಈ ದಿನ ದಿಃ.20.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಯ ಪರ ವಕೀಲರಿಂದಃ</u>**

ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ನನಗೆ ಸೇರಿದ ಅಡಿಕೆ ತೋಟ ಇದೆ. ನನ್ನ ಹೆಸರಿನಲ್ಲಿ ಅಡಿಕೆ ತೋಟ ಇದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುವುದಿಲ್ಲ. ನನಗೆ ಯಾವುದೇ ಅಡಿಕೆ ತೋಟ ಇಲ್ಲದ ಕಾರಣ ನಾನು ದಾಖಲೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವ್ಯವಸಾಯದ ಜೊತೆಗೆ ಟಿಲ್ಲರ್ ಮೆಕಾನಿಕ್ ಕೆಲಸವನ್ನು ಸಹ ಮಾಡುತ್ತೇನೆ. ನನಗೆ ಸೇರಿದ ಟಿಲ್ಲರ್ ಮೆಕಾನಿಕ್ ಶಾಪ್ ಇದೆ. ಸದರಿ ಶಾಪ್ ಅನ್ನು ನಡೆಸಲು ನಾನು ಪಂಚಾಯಿತಿಯಿಂದ ಪರವಾನಗಿ ಪಡೆದುಕೊಂಡಿರುತ್ತೇನೆ. ನನಗೆ ಮೆಕಾನಿಕ್ ಕೆಲಸ ಬಾರದಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿ ನನಗೆ ಸುಮಾರು 15-20 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿ ಯಾವ ವೃತ್ತಿ ಮಾಡುತ್ತಾರೆ ಎಂಬ ಬಗ್ಗೆ ಮಾಹಿತಿ ನನಗೆ ಇದೆ. ಆರೋಪಿಗೆ ತೋಟ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯು ಬೇರೆಯವರ ಜಮೀನಿನಲ್ಲಿ ಶುಂಠಿ ಬೆಳೆಯುವ ಕೆಲಸ ಮಾಡುತ್ತಾರೆ. ಆರೋಪಿಯು ಬೇರೆಯವರ ಜಮೀನಿನಲ್ಲಿ ಶುಂಠಿ ಬೆಳೆಯನ್ನು ಬೆಳೆಯುತ್ತಾರೆ.

ಆರೋಪಿಗೆ ಮನೆ ಕಟ್ಟುವ ಉದ್ದೇಶದಿಂದ ನಾನು ಸಾಲವನ್ನು ನೀಡಿರುತ್ತೇನೆ. ಆರೋಪಿಯು ಮನೆಯನ್ನು ಕಟ್ಟುತ್ತಿರುವ ಬಗ್ಗೆ ನಾನು ನೋಡಿರುತ್ತೇನೆ. ಆರೋಪಿಯು ಮನೆ ಕೆಲಸ ಪೂರ್ತಿಯಾಗಿ ಮುಗಿದಿದ್ದೀಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಬಸವನಹಳ್ಳಿ ಗ್ರಾಮದಲ್ಲಿ ಮನೆಯನ್ನು ಕಟ್ಟುತ್ತಿದ್ದರು. ಆರೋಪಿಯು ನೀವು ಹೇಳಿದ ಹಾಗೇ ಯಾವುದೇ ಮನೆಯನ್ನು ಕಟ್ಟುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆಯಲ್ಲಿ ಹೆಚ್ಚಿನ ಖರ್ಚು ಮಾಡುವಂತಹ ಕೆಲಸ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಸಹೋದರ ಸೈಯದ್ ನನಗೆ ಪರಿಚಯ ಇರುತ್ತಾರೆ. ನಾನು ನಮ್ಮ ಊರಿನ ಗಣೇಶನ ಜೊತೆ ಸೇರಿ ಚೀಟಿ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಚೀಟಿಗೆ ಸೈಯದ್ ಸಹ ಸದಸ್ಯರು ಎಂದರೆ ನನಗೆ ಗೊತ್ತಿಲ್ಲ. ಚೀಟಿಯ ಹಣದ ಭದ್ರತೆಗಾಗಿ ಸದಸ್ಯರಿಂದ ಚೆಕ್ ಗಳನ್ನು ಪಡೆದುಕೊಳ್ಳುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ

ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಮುಸ್ತಾಫ ರವರು ದೂರನ್ನು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು ತನಗೆ ಸೆರಿದ ಚೆಕ್ ಅನ್ನು ಸಹಿ ಮಾಡಿ ಮನೆಯಲ್ಲಿ ಇಟ್ಟಿದ್ದು ಸದರಿ ಚೆಕ್ ಅನ್ನು ಸೈಯದ್ ರವರು ನನಗೆ ತಂದು ಚೀಟಿಯ ಭದ್ರತೆಗಾಗಿ ನೀಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ  ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಬಳಿ ಆರೊಪಿಗೆ ಸೇರಿದ ಚೆಕ್ ಅನ್ನು ಆತನ ಸಹೋದರ ತಮಗೆ ನೀಡಿದ ಬಗ್ಗೆ ಪೋನ್ ಸಂಭಾಷಣೆ ಇದೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿಗೆ ನೀಡಿದ 3 ಲಕ್ಷ 80 ಸಾವಿರ ಹಣ ನನಗೆ ಅಡಿಕೆ ಬೆಳೆಯಿಂದ ಬಂದಂತಹ ಹಣ ಆಗಿದೆ. ನಾನು ಬ್ಯಾಂಕ್ ವ್ಯವಹಾರ ಮಾಡುತ್ತೇನೆ ಎಂದರೆ ಸರಿ. ನನ್ನ ಬ್ಯಾಂಕಿನ ಖಾತೆ ರಂಗೇನಹಳ್ಳಿ ಶಾಖೆಯ ವಿಜಯ ಬ್ಯಾಂಕ್ ಆಗಿರುತ್ತದೆ. ನನ್ನ ಬ್ಯಾಂಕ್ ಖಾತೆ ಚಾಲ್ತಿಯಲ್ಲಿ ಇದೆ. ನಾನು ಗೊಬ್ಬರವನ್ನು ಖರೀದಿ ಮಾಡಬೇಕಾದರೆ ಚೆಕ್ ಮುಖಾಂತರ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ನ ಖಾತೆಯ ಸ್ಟೇಟ್ ಮೆಂಟ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನನಗೆ ಎಲ್ಲಾ ಮೂಲಗಳಿಂದ ಬಂದ ಹಣವನ್ನು ನಾನು ಬ್ಯಾಂಕ್ ನಲ್ಲಿ ಠೇವಣಿ ಇಡುತ್ತೇನೆ ಎಂದರೆ ಸಾಕ್ಷಿ ನಾನು ಎಲ್ಲಾ ಸಮಯದಲ್ಲಿ ಠೇವಣಿ ಇಡುವುದಿಲ್ಲ ಎಂದು ನುಡಿಯುತ್ತಾರೆ.  3 ಲಕ್ಷ 80 ಸಾವಿರ ಹಣವನ್ನು 500 ಮುಖ ಬೆಲೆಯ ನೋಟುಗಳಲ್ಲಿ ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ಸಾಲವಾಗಿ ಕೊಟ್ಟಾಗ ಮಧ್ಯಾಹ್ನ 01.00-01.30 ಸಮಯ ಆಗಿತ್ತು. ಆ ಸಮಯದಲ್ಲಿ ನಾನು ಮತ್ತು ಆರೋಪಿ ಹಾಗೂ ನನ್ನ ಹೆಂಡತಿ ಮಾತ್ರ ಹಾಜರಿದ್ದೆವು. ಆರೋಪಿಯು ನನಗೆ ಸುಮಾರು 20 ದಿನಗಳ ಹಿಂದೆ ಹಣವನ್ನು ಸಾಲವಾಗಿ ಕೇಳಿರುತ್ತಾರೆ. ಸದರಿ ವಿಚಾರವನ್ನು ನೋಟೀಸ್ ನಲ್ಲಿ ಅಥವಾ ಪಿರ್ಯಾದಿನಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿಗೆ ನಾನು  3 ಲಕ್ಷ 80 ಸಾವಿರ ಹಣವನ್ನು ಸಾಲವಾಗಿ ಕೊಡಲು ನನಗೆ ಆರ್ಥಿಕ ಶಕ್ತಿ ಇಲ್ಲ ಎಂದರೆ ಸರಿಯಲ್ಲ. ನನಗೆ ಸೇರಿದ 2 ಎಕರೆ ಅಡಿಕೆ ತೋಟ ಇದೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ಮಗ ಮತ್ತು ಮಗಳು ಇದ್ದೇವೆ. ನಮ್ಮ ಕುಟುಂಬದ ಜೀವನ ನಿರ್ವಹಣೆಗಾಗಿ ಅಡಿಕೆ ತೋಟದಿಂದ ಬಂದ ಆದಾಯವನ್ನು ಅವಲಂಬಿಸಿರುತ್ತೇವೆ. 2018-19 ರಲ್ಲಿ ಮಳೆ ಜಾಸ್ತಿಯಾಗಿ ಅಡಿಕೆ ಫಸಲು ಕಡಿಮೆ ಬಂದಿದೆ ಎಂದರೆ ಸರಿಯಲ್ಲ. ನನಗೆ ಸೇರಿದ ಯಾವುದೇ ಅಡಿಕೆ ತೋಟ ಇಲ್ಲ ಹಾಗೂ ನನಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಬಳಿ ಪಹಣಿ ಇದೆ ಎಂದು ನುಡಿಯುತ್ತಾರೆ. ನಾವು ಅಡಿಕೆಯನ್ನು ಚೇಣಿಗೆ ಸಿದ್ದೇಶ್ವರ ಗ್ರಾಮದ ಮಹೇಶ್ವರಪ್ಪನಿಗೆ ಕೊಟ್ಟಿರುತ್ತೇವೆ.  ಅಡಿಕೆ ಚೇಣಿ

ಕರಾರು ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಯಾವುದೇ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಹೇಶ್ವರಪ್ಪರಿಂದ 7 ಲಕ್ಷ ಹಣವನ್ನು ಪಡೆದಿರುತ್ತೇನೆ. ಸದರಿ ಹಣವನ್ನು ಯಾವ ಬ್ಯಾಂಕಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಮಹೇಶ್ವರಪ್ಪರನ್ನು ಸಾಕ್ಷಿಯಾಗಿ ವಿಚಾರಣೆ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ಆರೋಪಿಯು ನಾನು ನೀಡಿರುವ ನೋಟೀಸ್ ಗೆ ಉತ್ತರ ನೀಡಿದ್ದಾರೆ ಎಂದರೆ ಸರಿ. ಆರೋಪಿ ಹಾಗೂ ನನ್ನ ನಡುವೆ ಯಾವುದೇ ಹಣದ ವ್ಯವಹಾರ ಆಗದ ಕಾರಣ, ಆರೋಪಿ ಯಾವುದೇ ಹಣವನ್ನು ಕೊಡುವ ಹಾಗೇ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಪಡೆಯಲು ಈ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ:ಪ್ರ.ದ.ನ್ಯಾ.ದಂ.ರವರು,
ತರೀಕೆರೆ.